Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, डिसेम्बर 15, 1986 | मार्गशिर 24, 1908 (शक) | खन्ड—5 |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |


## MINISTRY OF LAW AND JUSTICE

(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely — (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, 1949

[1949ರ ಅಧಿನಿಯಮ ಸಂಖ್ಯೆ 54]

[14ನೇ ಡಿಸೆಂಬರ್ 1949]

ಕೆಲವು ಬ್ಯಾಂಕಿಂಗ್ ಮತ್ತು ವಿಮಾ ಕಂಪನಿಗಳಿಗೆ ಸಂಬಂಧಿಸಿದ ಔದ್ಯಮಿಕ ವಿವಾದಗಳ ನ್ಯಾಯ ನಿರ್ಣಯದ ಬಗ್ಗೆ ಉಪಬಂಧಿಸುವ ಅಧಿನಿಯಮ,

ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಅಥವಾ ಇತರ ಕಾರ್ಯ ಸಂಸ್ಥೆಗಳನ್ನು ಹೊಂದಿರುವ ಬ್ಯಾಂಕಿಂಗ್ ಮತ್ತು ವಿಮಾ ಕಂಪನಿಗಳಿಗೆ ಸಂಬಂಧಿಸಿದ ಔದ್ಯಮಿಕ ವಿವಾದಗಳ ನ್ಯಾಯ ನಿರ್ಣಯದ ಬಗ್ಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ ;

—ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ.

1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ :—(1) ಈ ಅಧಿನಿಯಮವನ್ನು ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, 1949 ಎಂದು ಕರೆಯತಕ್ಕುದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ,

2. ಪರಿಭಾಷೆಗಳು :— ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿ ಏನಾದರೂ ಇದ್ದ ಹೊರತು ''ಐತೀರ್ಪು'', ''ಬ್ಯಾಂಕಿಂಗ್ ಕಂಪೆನಿ'', ''ಔದ್ಯಮಿಕ ವಿವಾದ'' ಮತ್ತು 'ವಿಮಾ ಕಂಪೆನಿ' ಎಂಬ ಪದಾವಳಿಗಳು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಔದ್ಯಮಿಕ ವಿವಾದಗಳ ಅಧಿನಿಯಮ, 1947 (1947ರ 14)ರ 2ನೇ ಪ್ರಕರಣದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರುತ್ತವೆ.

3. 1947ರ ಅಧಿನಿಯಮದ ಸಂಖ್ಯೆ 14ರ 2ನೇ ಪ್ರಕರಣದ ತಿದ್ದುಪಡಿ.—ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1952 (1952ರ 48)ರ 2ನೇ ಪ್ರಕರಣ ಮತ್ತು 1ನೇ ಅನುಸೂಚಿಯ ಮೂಲಕ ನಿರಸಿತವಾಗಿದೆ.

4. ನ್ಯಾಯನಿರ್ಣಯ, ವಿಚಾರಣೆ ಅಥವಾ ಇತ್ಯರ್ಥಕ್ಕಾಗಿ ಕೆಲವೊಂದು ಔದ್ಯಮಿಕ ವಿವಾದಗಳನ್ನು ರಾಜ್ಯಸರ್ಕಾರವು ಒಪ್ಪಿಸುವ ಬಗ್ಗೆ ನಿಷೇಧ :—ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ರಾಜ್ಯ ಸರ್ಕಾರ ಅಥವಾ ಆ ಸರ್ಕಾರದ ಅಧೀನದಲ್ಲಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರವು 'ಯಾವುದೇ ಬ್ಯಾಂಕಿಂಗ್ ಅಥವಾ ವಿಮಾ ಕಂಪನಿಗೆ ಸಂಬಂಧಿಸಿದ ಔದ್ಯಮಿಕ ವಿವಾದ ಅಥವಾ ಅಂಥ ವಿವಾದಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ನ್ಯಾಯ ನಿರ್ಣಯ, ವಿಚಾರಣೆ, ಅಥವಾ ಇತ್ಯರ್ಥಕ್ಕಾಗಿ ಯಾವುದೇ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರಕ್ಕೆ ಒಪ್ಪಿಸುವುದು ಸಕ್ಷಮವಾಗಿರತಕ್ಕದಲ್ಲ.

5. ರಾಜ್ಯ ನ್ಯಾಯಾಧಿಕರಣಗಳ ಮುಂದೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳಿಗೆ ಸಂಬಂಧಿಸಿದ ವ್ಯವಹರಣೆಗಳನ್ನು ಕೊನೆಗೊಳಿಸುವಿಕೆ ಮತ್ತು ಕೇಂದ್ರ ಸರ್ಕಾರದಿಂದ ರಚಿಸಲಾದ ನ್ಯಾಯಾಧಿಕರಣಗಳಿಗೆ ಅಂಥ ವಿವಾದವನ್ನು ಒಪ್ಪಿಸುವುದು.—(1) ಯಾವುದೇ ಕಾನೂನಿನ ಮೇರೆಗೆ ಬ್ಯಾಂಕಿಂಗ್ ಅಥವಾ ವಿಮಾಕಂಪನಿಗೆ ಸಂಬಂಧಿಸಿದ ಯಾವುದೇ ಔದ್ಯಮಿಕ ವಿವಾದ ಅಥವಾ ಅಂಥ ವಿವಾದಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು 1949ರ ಏಪ್ರಿಲ್ 30ನೆಯ ದಿನಾಂಕಕ್ಕೆ ಮುಂಚೆ ರಾಜ್ಯ ಸರ್ಕಾರ ಅಥವಾ ಅಂಥ ಸರ್ಕಾರದ ಅಧೀನದಲ್ಲಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರದ ಮೂಲಕ ನ್ಯಾಯನಿರ್ಣಯ ಅಥವಾ ಇತ್ಯರ್ಥಕ್ಕಾಗಿ ಯಾವುದೇ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರಕ್ಕೆ ಒಪ್ಪಿಸಲಾಗಿರುವಲ್ಲಿ ಮತ್ತು ಅಂಥ ಒಪ್ಪಿಸುವಿಕೆಯ ಸಂಬಂಧವಾಗಿ ಅಥವಾ ಅದರಿಂದಾಗಿ ಉದ್ಭವಿಸುವ ಯಾವುವೇ ವ್ಯವಹರಣೆಗಳು ಆ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವಲ್ಲಿ ಆಗ ಮೇಲೆ ಹೇಳಿದ ದಿನಾಂಕದಂದು ಅಂಥ ಒಪ್ಪಿಸುವಿಕೆಯನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕುದು ಮತ್ತು ಅಂಥ ಎಲ್ಲ ವ್ಯವಹರಣೆಗಳು ಕೊನೆಗೊಳ್ಳತಕ್ಕುದು.

(2) ಕೇಂದ್ರ ಸರ್ಕಾರವು ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ ಬರಹದಲ್ಲಿನ ಆದೇಶದ ಮೂಲಕ ಸದರಿ ಅಧಿನಿಯಮದ 10ನೇ ಪ್ರಕರಣದ ಮೇರೆಗೆ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯಿಸುವ ಪ್ರತಿಯೊಂದು ಔದ್ಯಮಿಕ ವಿವಾದವನ್ನೂ ನ್ಯಾಯನಿರ್ಣಯಕ್ಕಾಗಿ ಸದರಿ ಅಧಿನಿಯಮದ ಮೇರೆಗೆ ರಚಿಸಲಾದ ಔದ್ಯಮಿಕ ನ್ಯಾಯಾಧಿಕರಣಕ್ಕೆ ಒಪ್ಪಿಸತಕ್ಕುದು.

6. ಯಾವ ವಿವಾದಗಳ ಸಂಬಂಧದಲ್ಲಿ ಐತೀರ್ಪುಗಳನ್ನು ಅಥವಾ ತೀರ್ಮಾನಗಳನ್ನು ಮಾಡಲಾಗಿದೆಯೋ ಅವುಗಳನ್ನು ಪುನರ್ ನ್ಯಾಯನಿರ್ಣಯಕ್ಕಾಗಿ ಒಪ್ಪಿಸಲು ಕೇಂದ್ರ ಸರ್ಕಾರದ ಅಧಿಕಾರ.—(1) ರಾಜ್ಯ ಸರ್ಕಾರ ಅಥವಾ ಅಂಥ ಸರ್ಕಾರದ ಅಧೀನದಲ್ಲಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರವು ರಚಿಸಿದ ಅಥವಾ ನೇಮಿಸಿದ ಯಾವುದೇ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮೂಲಕ ಯಾವುದೇ ಬ್ಯಾಂಕಿಂಗ್ ಅಥವಾ ವಿಮಾ ಕಂಪನಿಗೆ ಸಂಬಂಧಪಟ್ಟ ಯಾವುದೇ ಔದ್ಯಮಿಕ ವಿವಾದದ ಬಗ್ಗೆ ಯಾವುದೇ ಐತೀರ್ಪು ಅಥವಾ ತೀರ್ಮಾನವನ್ನು ಮಾಡಲಾಗಿರುವಲ್ಲಿ ಆಗ ಕೇಂದ್ರ ಸರಕಾರವು ಸದರಿ ಐತೀರ್ಪು ಅಥವಾ ತೀರ್ಮಾನವು ಜಾರಿಯಲ್ಲಿದ್ದಾಗ್ಯೂ ಬರಹದಲ್ಲಿನ ಆದೇಶದ ಮೂಲಕ ಸದರಿ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಆ ವಿವಾದವನ್ನು ಅಥವಾ ವಿವಾದದಲ್ಲಿರುವ ಯಾವುವೇ ವಿಷಯಗಳನ್ನು ಸದರಿ ಅಧಿನಿಯಮದ ಮೇರೆಗೆ ರಚಿತವಾದ ಔದ್ಯಮಿಕ ನ್ಯಾಯಾಧಿಕರಣಕ್ಕೆ ಒಪ್ಪಿಸಬಹುದು ಮತ್ತು ಯಾವ ಔದ್ಯಮಿಕ ನ್ಯಾಯಾಧಿಕರಣಕ್ಕೆ ಪುನರ್ ನ್ಯಾಯ ನಿರ್ಣಯಕ್ಕಾಗಿ ಆ ವಿವಾದವನ್ನು ಅಥವಾ ವಿವಾದದಲ್ಲಿರುವ ಯಾವುದೇ ವಿಷಯವನ್ನು ಒಪ್ಪಿಸಲಾಗಿದೆಯೋ ಆ ಔದ್ಯಮಿಕ

ನ್ಯಾಯಾಧಿಕರಣವು ಐತೀರ್ಪನ್ನು ಸಲ್ಲಿಸುವವರಿಗೆ ಅಥವಾ ಕೇಂದ್ರ ಸರ್ಕಾರವು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ಅವಧಿಯವರೆಗೆ ಹಾಗೆ ಮಾಡಿದ ಐತೀರ್ಪು ಅಥವಾ ತೀರ್ಮಾನವನ್ನು ಅಥವಾ ಅಂಥ ಐತೀರ್ಪು ಅಥವಾ ತೀರ್ಮಾನದ ಯಾವುದೇ ಭಾಗವನ್ನು ಕಾರ್ಯ ರೂಪಕ್ಕೆ ತರುವುದನ್ನು ತಡೆಹಿಡಿಯಬಹುದು.

(2) ಯಾವ ಔದ್ಯಮಿಕ ನ್ಯಾಯಾಧಿಕರಣಕ್ಕೆ ಪುನರ್ ನ್ಯಾಯನಿರ್ಣಯಕ್ಕಾಗಿ ವಿವಾದವನ್ನು ಅಥವಾ ವಿವಾದದಲ್ಲಿರುವ ಯಾವುದೇ ವಿಷಯವನ್ನು ಹಾಗೆ ಒಪ್ಪಿಸಲಾಗಿತ್ತೋ, ಆ ಔದ್ಯಮಿಕ ನ್ಯಾಯಾಧಿಕರಣವು ಸದರಿ ಅಧಿನಿಯಮದ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತನ್ನ ಐತೀರ್ಪನ್ನು ಸಲ್ಲಿಸಿದ ತರುವಾಯ, ಕೇಂದ್ರ ಸರ್ಕಾರವು ಬರಹದಲ್ಲಿನ ಆದೇಶದ ಮೂಲಕ ರಾಜ್ಯ ಸರ್ಕಾರದ ಅಥವಾ ಅಂಥ ಸರ್ಕಾರದ ಅಧೀನದಲ್ಲಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರದ ಮೂಲಕ ರಚಿಸಿದ ಅಥವಾ ನೇಮಿಸಿದ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಅಂಥ ವಿವಾದದ ಬಗ್ಗೆ ಹಿಂದೆ ಮಾಡಿದ ಐತೀರ್ಪು ಅಥವಾ ತೀರ್ಮಾನದ ಅಥವಾ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಐತೀರ್ಪು ಅಥವಾ ತೀರ್ಮಾನದ ಭಾಗವು ಕಾರ್ಯಾಚರಣೆಯಲ್ಲಿರುವುದು ನಿಂತುಹೋಗತಕ್ಕದೆಂದು ಘೋಷಿಸಬಹುದು.

7. 1949ರ ಅಧ್ಯಾದೇಶ 28ರ ನಿರಸನ.—1949ರ ಔದ್ಯಮಿಕ ವಿವಾದಗಳ (ಬ್ಯಾಂಕಿಂಗ್ ಮತ್ತು ವಿಮಾ ಕಂಪೆನಿಗಳ) ಎರಡನೇ ಅಧ್ಯಾದೇಶ (1949ರ 28)ವನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ ಸದರಿ ಅಧ್ಯಾದೇಶದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಅಂಥ ಕಾರ್ಯವನ್ನು ಮಾಡಿದ ಅಥವಾ ಕ್ರಮವನ್ನು ಕೈಗೊಂಡ ದಿನದಂದು ಈ ಅಧಿನಿಯಮವು ಜಾರಿಯಲ್ಲಿದ್ದರ ಹೇಗೋ ಹಾಗೆ, ಈ ಅಧಿನಿಯಮದಿಂದ ಅಥವಾ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಕಾರ್ಯ ಅಥವಾ ಕೈಗೊಂಡ ಕ್ರಮ ಎಂಬುದಾಗಿ ಭಾವಿಸತಕ್ಕದು.

The above translation in Kannada of the Industrial Disputes (Banking and Insurance Companees Act 1949 (Act No. 54 of 1949) has been authorised by the President to be published in the official Gazette under clause (a) of Section 2 of the Authorised Translations (Central Laws) Act, 1973.

Secretary to Government of India

W D P 6273